## ಕರ್ನಾಟಕ ಸರ್ಕಾರ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 178
2. ಮಾನ್ಯ ಸದಸ್ಯರ ಹೆಸರು : ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 05.12.2023
4. ಉತ್ತರಿಸುವ ಸಚಿವರು : ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಪ್ರಸಕ್ತ ಸಾಲಿನಲ್ಲಿ ಕಬ್ಬು ಅರೆಯುವ ಮೈಸೂರು ಸಕ್ಕರೆ ಕಂಪನಿಗೆ ಸರ್ಕಾರ ಇದುವರೆವಿಗೂ ಎಷ್ಟು ಮೊತ್ತವನ್ನು ಬಿಡುಗಡೆಗೊಳಿಸಲಾಗಿದೆ; | ದಿ ಮೈಸೂರು ಷುಗರ್ ಕಂಪನಿಯಲ್ಲಿ 2023-24ನೇ ಹಂಗಾಮಿನಲ್ಲಿ ಕಬ್ಬು ಅರೆಯುವ ಕಾರ್ಯವನ್ನು ಪ್ರಾರಂಭಿಸುವುದಕ್ಕಾಗಿ ದಿನಾಂಕ:14.06.2023ರಂದು ರಾಜ್ಯ ಸರ್ಕಾರದಿಂದ ರೂ.50.00 ಕೋಟಿಗಳನ್ನು ಬಿಡುಗಡೆಗೊಳಿಸಲಾಗಿದೆ. |
| (ಆ) | ಪ್ರಸಕ್ತ ಸಾಲಿನಲ್ಲಿ ಇದುವರೆವಿಗೂ ಎಷ್ಟು ಟನ್ ಕಬ್ಬನ್ನು ಅರೆಯಲಾಗಿದೆ; | 2023-24ನೇ ಹಂಗಾಮಿನಲ್ಲಿ ದಿನಾಂಕ:26.11.2023ರವರೆಗೆ ದಿ ಮೈಸೂರು ಷುಗರ್ ಕಂಪನಿಯಲ್ಲಿ 2,38,056 ಮೆ.ಟನ್ ಕಬ್ಬನ್ನು ನುರಿಸಲಾಗಿರುತ್ತದೆ. |
| (ಇ) | ಸದರಿ ಕಬ್ಬಿನಿಂದ ಉತ್ಪಾದಿಸಲಾಗಿರುವ ಸಕ್ಕರೆ ಪ್ರಮಾಣವೆಷ್ಟು; | ದಿನಾಂಕ:23.11.2023ರ ಅಂತ್ಯಕ್ಕೆ ಒಟ್ಟು ರೂ.1,63,828 ಕ್ವಿಂಟಾಲ್ ಸಕ್ಕರೆಯನ್ನು ಉತ್ಪಾದಿಸಲಾಗಿರುತ್ತದೆ. |
| (ಈ) | ಕಬ್ಬು ಸರಬರಾಜು ಮಾಡಿರುವ ರೈತರಿಗೆ ಇದುವರೆವಿಗೂ ಪಾವತಿಸಲಾಗಿರುವ ಮೊತ್ತವೆಷ್ಟು; ಪಾವತಿಸಬೇಕಾಗಿರುವ ಬಾಕಿ ಮೊತ್ತವೆಷ್ಟು; | 2023-24ನೇ ಸಾಲಿನಲ್ಲಿ ಕಬ್ಬು ಸರಬರಾಜು ಮಾಡಿದ ರೈತರಿಗೆ ರೂ.69.51 ಕೋಟಿಗಳ ಕಬ್ಬು ಬಿಲ್ಲನ್ನು ಪಾವತಿಸಬೇಕಾಗಿದ್ದು, ಇದರಲ್ಲಿ ದಿನಾಂಕ:04.11.2023ರ ಅಂತ್ಯಕ್ಕೆ ರೂ.64.37 ಕೋಟಿಗಳನ್ನು ಪಾವತಿಸಲಾಗಿರುತ್ತದೆ. ಬಾಕಿ ಇರುವ ರೂ.5.14 ಕೋಟಿಗಳ ಮೊತ್ತವನ್ನು ಪಾವತಿಸಲು ಕ್ರಮವಹಿಸಲಾಗುತ್ತಿದೆ. |
| (ಉ) | ಮೈಸೂರು ಸಕ್ಕರೆ ಕಾರ್ಖಾನೆ ಆಡಳಿತ ಮಂಡಳಿಯ ವ್ಯಾಪ್ತಿಯಲ್ಲಿ ನಡೆಸಲಾಗುತ್ತಿರುವ ಶಾಲಾ ಕಾಲೇಜುಗಳ ಸಂಖ್ಯೆ ಎಷ್ಟು; | ದಿ ಮೈಸೂರು ಷುಗರ್ ಕಂಪನಿಯ ಆಡಳಿತ ಮಂಡಳಿ ಅಧೀನದಲ್ಲಿ ಈ ಕೆಳಕಂಡ ಮೂರು ಶಾಲಾ ಕಾಲೇಜುಗಳು ಇರುತ್ತವೆ.<br>1. ಮೈಷುಗರ್ ಪ್ರೌಢಶಾಲೆ (ಅನುದಾನಿತ)<br>2. ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಕೈಗಾರಿಕಾ ತರಬೇತಿ ಸಂಸ್ಥೆ(ಅನುದಾನಿತ)<br>3. ಮೈಷುಗರ್ ಪ್ರಾಥಮಿಕ ಶಾಲೆ (ಅನುದಾನರಹಿತ) |
| (ಊ) | ಈ ಶಾಲಾ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಕಾಲಕಾಲಕ್ಕೆ ವೇತನ ಬಡ್ತಿ(ಇಂಕ್ರಿಮೆಂಟ್) ನೀಡದಿರಲು ಕಾರಣಗಳೇನು; ದೀರ್ಘಕಾಲದಿಂದ ಸದರಿ ವೇತನ ಪರಿಷ್ಕರಣೆ ಮಾಡದಿರಲು ಕಾರಣಗಳೇನು; | 1. ರಾಜ್ಯ ಸರ್ಕಾರದ ವೇತನಕ್ಕೆ ಒಳಪಟ್ಟಿರುವ ಮೈಷುಗರ್ ಪ್ರೌಢಶಾಲೆ ಮತ್ತು ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಕೈಗಾರಿಕಾ ತರಬೇತಿ ಸಂಸ್ಥೆಯ ಅನುದಾನಿತ ಸಿಬ್ಬಂದಿಗಳಿಗೆ ಸರ್ಕಾರದ ನಿಯಮಗಳನುಸಾರ ಆಡಳಿತ ಮಂಡಳಿಯ ಅನುಮೋದನೆಯನ್ನು ಪಡೆದು ವೇತನ ಬಡ್ತಿ ಮತ್ತು ವೇತನ ಪರಿಷ್ಕರಣೆಯನ್ನು ಮಾಡಲಾಗುತ್ತಿದೆ.<br>2. ಮೈಷುಗರ್ ಪ್ರೌಢಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇರುವ ಕಾರಣದಿಂದಾಗಿ ವಯೋ ನಿವೃತ್ತಿ ಹೊಂದಿರುವ ಶಿಕ್ಷಕರ ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳಲು ಅನುಮತಿ ದೊರಕದ ಕಾರಣ 4 ಸಹ ಶಿಕ್ಷಕರನ್ನು ಮತ್ತು ಒಬ್ಬ ಅಟೆಂಡರ್ ಅನ್ನು ಸಂಚಿತ ವೇತನದ ಆಧಾರದ ಮೇಲೆ ತಾತ್ಕಾಲಿಕವಾಗಿ ನೇಮಕಾತಿ ಮಾಡಿಕೊಳ್ಳಲಾಗಿದೆ ಹಾಗೂ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿನ ಒಂದು ವಿಭಾಗಕ್ಕೆ ವೇತನ ಅನುದಾನಡ ದೊರಕದ ಕಾರಣದಿಂದಾಗಿ ಒಬ್ಬ ಕಿರಿಯ ತರಬೇತಿ ಅಧಿಕಾರಿ, ಒಬ್ಬ ದ್ವಿತಿಯ ದರ್ಜೆ ಗುಮಾಸ್ತ ಮತ್ತು ಒಬ್ಬ ಅಟೆಂಡರ್ ಅನ್ನು ಸಂಚಿತ ವೇತನದ ಆಧಾರದ ಮೇಲೆ ತಾತ್ಕಾಲಿಕವಾಗಿ ನೇಮಕಾತಿ ಮಾಡಿಕೊಳ್ಳಲಾಗಿದೆ.. |

| | | |
|---|---|---|
| | | ದಿ ಮೈಸೂರು ಷುಗರ್ ಕಂಪನಿಗೆ ಕಬ್ಬು ಸರಬರಾಜು ಮಾಡುವ ರೈತರಿಂದ ಪ್ರತಿ ಟನ್‌ಗೆ ರೂ.4.00 ರಂತೆ ವಂತಿಗೆಯನ್ನು ಕಟಾಯಿಸಿಕೊಂಡು ಮತ್ತು ಅದಕ್ಕೆ ಕಂಪನಿಯಿಂದ ರೂ.4.00ಗಳನ್ನು ಸೇರಿಸಿ ರೈತರ ಕ್ಷೇಮಾಭಿವೃದ್ಧಿ ಫಂಡ್ ಟ್ರಸ್ಟ್‌ಗೆ ಜಮ ಮಾಡಲಾಗುತ್ತದೆ. ಸದರಿ ಮೊತ್ತದಿಂದ ತಾತ್ಕಾಲಿಕ ಸಿಬ್ಬಂದಿಗಳಿಗೆ ವೇತನವನ್ನು ನೀಡಲಾಗುತ್ತಿದೆ. ಕಳೆದ 5-6 ವರ್ಷಗಳಿಂದ ಕಡಿಮೆ ಪ್ರಮಾಣದ ಕಬ್ಬನ್ನು ನುರಿಸಲಾಗಿರುತ್ತದೆ ಹಾಗೂ ಕೆಲವು ವರ್ಷಗಳಲ್ಲಿ ದಿ ಮೈಸೂರು ಷುಗರ್ ಕಂಪನಿಯಲ್ಲಿ ಕಬ್ಬು ಅರೆಯುವ ಕಾರ್ಯವನ್ನು ಸ್ಥಗಿತಗೊಳಿಸಲಾಗಿರುತ್ತದೆ. ಇದರಿಂದಾಗಿ ರೈತರ ಕ್ಷೇಮಾಭಿವೃದ್ಧಿ ಫಂಡ್ ಟ್ರಸ್ಟ್‌ಗೆ ವಂತಿಗೆ ಕ್ರೋಢೀಕರಣದ ಪ್ರಮಾಣವು ಕಡಿಮೆಯಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಆರ್ಥಿಕ ಸಂಕಷ್ಟದಿಂದಾಗಿ ತಾತ್ಕಾಲಿಕ ಸಿಬ್ಬಂದಿಗಳಿಗೆ ವೇತನ ಪರಿಷ್ಕರಣೆ ಮಾಡಲು ಸಾಧ್ಯವಾಗಿರುವುದಿಲ್ಲ. |
| (ಖ) | ಯಾವ ಕಾಲಮಿತಿಯಲ್ಲಿ ವೇತನ ಪರಿಷ್ಕರಣೆ ಮಾಡಲಾಗುವುದು? | 2023-24ನೇ ಹಂಗಾಮಿನಲ್ಲಿ ದಿನಾಂಕ:26.11.2023ರವರೆಗೆ 2,38,056 ಮೆ.ಟನ್ ಕಬ್ಬನ್ನು ನುರಿಸಲಾಗಿರುತ್ತದೆ. ಇದರಿಂದಾಗಿ 2023-24ನೇ ಸಾಲಿನಲ್ಲಿ ಇದುವರೆವಿಗೂ ರೂ.18,40,000.00ಗಳ ವಂತಿಗೆ ರೈತರ ಕ್ಷೇಮಾಭಿವೃದ್ಧಿ ಫಂಡ್ ಟ್ರಸ್ಟ್‌ಗೆ ಜಮೆಯಾಗಿರುತ್ತದೆ. ಈ ಮೊತ್ತದಲ್ಲಿ ತಾತ್ಕಾಲಿಕ ಸಿಬ್ಬಂದಿಗಳಿಗೆ ವೇತನವನ್ನು ನೀಡಲಾಗಿದ್ದು, ಇನ್ನೂ 08 ವೇತನವನ್ನು ನೀಡುವುದು ಬಾಕಿ ಇರುತ್ತದೆ. ಪ್ರಸಕ್ತ ತಾತ್ಕಾಲಿಕ ಸಿಬ್ಬಂದಿಗಳಿಗೆ ನೀಡುತ್ತಿರುವ ವೇತನವನ್ನು ಪಾವತಿಸಲು ಹಣಕಾಸಿನ ಕೊರತೆ ಇರುತ್ತದೆ. ಮುಂದಿನ ದಿನಗಳಲ್ಲಿ ಕಂಪನಿಯ ಸಾಮರ್ಥ್ಯಕ್ಕೆ ಅನುಗುಣವಾಗಿ ಕಬ್ಬು ನುರಿಸುವ ಗುರಿಯನ್ನು ಹೊಂದಲಾಗಿದ್ದು, ಅಧಿಕ ಕಬ್ಬು ನುರಿಸಿದಲ್ಲಿ ಹೆಚ್ಚಿನ ಪ್ರಮಾಣದ ವಂತಿಗೆಯು ರೈತರ ಕ್ಷೇಮಾಭಿವೃದ್ಧಿ ಫಂಡ್ ಟ್ರಸ್ಟ್‌ಗೆ ಸಂಗ್ರಹವಾಗಲಿದೆ. ಸದರಿ ಮೊತ್ತದಲ್ಲಿ ತಾತ್ಕಾಲಿಕ ಸಿಬ್ಬಂದಿಗಳ ವೇತನವನ್ನು ನಿಯಮಾನುಸಾರ ಪರಿಷ್ಕರಣೆ ಮಾಡಲು ಕ್ರಮವಹಿಸಲಾಗುವುದು. |

ಸಂಖ್ಯೆ: ಸಿಐ 330 ಸಿಓಎಫ್ 2023

(ಶಿವಾನಂದ ಎಸ್. ಪಾಟೀಲ)
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ
ಹಾಗೂ ಕೃಷಿ ಮಾರುಕಟ್ಟೆ ಸಚಿವರು